**ಸಾಕ್ಷಿಗೆ ದಿನಾಂಕಃ12-06-2024 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ ವಾದಿ ಪರಃ ಶ್ರೀ.ಕೆ ಸಿ ಸಿ ವಕೀಲರಿಂದ ಃ**

ನನ್ನ ತಂದೆಯ ಹೆಸರು ಮಹಾಬಲ ಭಟ್. ನನ್ನ ತಂದೆಗೆ 3 ಜನ ಗಂಡು ಮಕ್ಕಳು. 2 ನೇ ಪ್ರತಿವಾದಿ ನನ್ನ ಅಣ್ಣ ಎಂದರೆ ಚಂದ್ರಶೇಖರ್ ರವರ ಹೆಂಡತಿ. ವಾದಿ ನನಗೆ ಚಿಕ್ಕಂದಿನಿಂದಲೂ ಪರಿಚಯ. ವಾದಿ ಹಾಗೂ ನಮ್ಮ ಮನೆ ಸ್ವಲ್ಪ ದೂರದಲ್ಲಿ ಬರುತ್ತದೆ. ವಾದಿ ಹಾಗೂ ನಮ್ಮ ಜಮೀನು ಅಕ್ಕ-ಪಕ್ಕದಲ್ಲಿದೆ ಎಂದರೆ ಸರಿ.

2. ವಾದಿ ಮತ್ತು ನನಗೆ ನಮ್ಮ ನಮ್ಮ ಜಮೀನುಗಳು ಭೂ ಸುಧಾರಣಾ ಕಾಯಿದೆಯಡಿ ಮಂಜೂರಾದ ಜಮೀನುಗಳು ಎಂದರೆ ಸರಿ. ಭೂ ಸುಧಾರಣೆ ಕಾಯಿದೆಯಡಿ ಸದರಿ ಆಸ್ತಿಗಳು ಮಂಜೂರಾಗುವ ಪೂರ್ವದಿಂದಲೂ ಸಹ ಸದರಿ ಆಸ್ತಿಗಳು ನಮ್ಮ ನಮ್ಮ ಸ್ವಾಧೀನದಲ್ಲಿ ಇದ್ದವು ಎಂದರೆ ಸರಿ. ಭೂ ಸುಧಾರಣೆ ಕಾಯಿದೆಯಡಿಯಲ್ಲಿ ಮಂಜೂರಾದಾಗ ನಮ್ಮ ಕುಟುಂಬಕ್ಕೆ ಮಲೆನಾಡು ಗ್ರಾಮದ ಸ ನಂ. 111 ರಲ್ಲಿ ಮೊದಲಿಗೆ 40 ಗುಂಟೆ ಜಾಗ ಮಂಜೂರಾಗಿದ್ದು, ನಂತರದಲ್ಲಿ ಪಹಣಿಯಲ್ಲಿ 39 ಗುಂಟೆ ಆಗಿರುತ್ತದೆ. ವಾದಿಗೆ ಭೂ ಸುಧಾರಣೆ ಕಾಯಿದೆಯಡಿಯಲ್ಲಿ ಸದರಿ ಸರ್ವೆ ನಂಬರ್ ನಲ್ಲಿ 33 ಗುಂಟೆ ಜಾಗ ಮಂಜೂರಾಗಿರುತ್ತದೆ ಎಂದರೆ ಸರಿ. ವಾದಿಗೆ ಬಂದ 33 ಗುಂಟೆ ಆಸ್ತಿಯಲ್ಲಿ ಅವರು ಹಾಗೂ ನಮಗೆ ಬಂದ 39 ಗುಂಟೆ ಆಸ್ತಿಯಲ್ಲಿ ನಾವು ಸಾಗುವಳಿ ಮಾಡುತ್ತಿದ್ದೇವೆ ಎಂದರೆ ಸರಿ. ಭೂ ಸುಧಾರಣೆ ಕಾಯಿದೆ ಬಂದ ಸಮಯದಲ್ಲಿ ನಾವು ಸದರಿ ಆಸ್ತಿಗಳಿಗೆ ಯಾವುದೇ ಮ್ಯುಟೇಶನ್ ಪೋಡಿ ಮಾಡಿಸಿರುವುದಿಲ್ಲ ಎಂದರೆ ಸರಿ. ವಾದಿಯ ಜಮೀನು ನಮ್ಮ ಆಸ್ತಿಯ ಪೂರ್ವ ದಿಕ್ಕಿನಲ್ಲಿ ಬರುತ್ತದೆ. ಸದರಿ ಆಸ್ತಿಯನ್ನು ಅನಾದಿಕಾಲಂದಿಲೂ ವಾದಿಯ ಪೂರ್ವಜರು ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ.

3. 2017 ರಲ್ಲಿ ವಾದಿ ಸ ನಂ.111 ರಲ್ಲಿ ನಮ್ಮ ಹಾಗೂ ವಾದಿಯ ಆಸ್ತಿಗಳಿಗೆ ಸಂಬಂಧಿಸಿದಂತೆ ಮ್ಯುಟೇಶನ್ ಪೋಡಿ ಮಾಡುವಂತೆ ಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಪ್ರಸ್ತುತದಲ್ಲಿ ನಮ್ಮ ಆಸ್ತಿಗಳು ಮಲೆನಾಡು ಗ್ರಾಮದ ಸ ನಂ. 111/12 ರಲ್ಲಿ ಬರುತ್ತದೆ ಎಂದರೆ ಸರಿ. ಆದರೆ -

ಪೋಡಿಯಾಗುವ ಸಮಯದಲ್ಲಿ ವಾದಿಯ ಜಮೀನು 111/10 ಮತ್ತು 111/13 ರಂತೆ ಪೋಡಾಗಿರುತ್ತದೆ ಎಂದರೆ ಸರಿ. ಸ ನಂ. 111/10 ರಲ್ಲಿ 13 ಗುಂಟೆ ಮತ್ತು 111/13 ರಲ್ಲಿ 20 ಗುಂಟೆ ಪೋಡಿಯಾಗಿರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಯು ಮುಂದುವರೆದು, ವಾದಿಗೆ ಸಂಬಂಧ ಪಟ್ಟ 33 ಗುಂಟೆ ಆಸ್ತಿಯು ಈಗಲೂ ಸಹ ಒಟ್ಟಿಗೇ ಒಂದೇ ಕಡೆ ಇರುತ್ತದೆ ಎಂದು ನುಡಿಯುತ್ತಾರೆ. ಪೋಡಿಯಾಗುವ ಸಮಯದಲ್ಲಿ ಸರ್ವೇಯರ್ ರವರ ತಪ್ಪಿನಿಂದ ಸ ನಂ. 111/12 ರ ಎರಡೂ ಬದಿ ಒಂದು ಕಡೆ 13 ಗುಂಟೆ ಮತ್ತು ಮತ್ತೊಂದು ಕಡೆ 20 ಗುಂಟೆ ಎಂದು ತಪ್ಪಾಗಿ ನಕ್ಷೆ ತಯಾರಾಗಿರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಸದರಿ 13 ಗುಂಟೆಯನ್ನು ಒತ್ತುವರಿ ಮಾಡಿಕೊಂಡು ಈಗ 1 ಎಕರೆ 12 ಗುಂಟೆ ಜಾಗದ ಸ್ವಾಧೀನದಲ್ಲಿ ಇರುತ್ತೇನೆ ಎಂದರೆ ಸರಿಯಲ್ಲ. ಹಲವಾರು ಬಾರಿ ವಾದಿ ತನಗೆ ಸೇರಿದ 13 ಗುಂಟೆ ಜಾಗವನ್ನು ಬಿಟ್ಟುಕೊಡಬೇಕಾಗಿ ಕೋರಿದ್ದರೂ ಸಹ, ನಾನು ಬಿಟ್ಟುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ನಾನು ನನ್ನ ಜಮೀನಿನನ ಜೊತೆ ವಾದಿಗೆ ಸೇರಿದ ಜಮೀನನ್ನು ಸಹ ಪ್ರಯತ್ನಿಸುತ್ತಿರುತ್ತೇನೆ ಎಂದರೆ ಸರಿಯಲ್ಲ.

(ಮುಂದುವರಿದ ಪಾಟೀ ಸವಾಲು ಸಮಯಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

**(ದಿನಾಂಕಃ 12-06-2024.ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಸಹಿ/-**
**ಪ್ರ.ದ.ನ್ಯಾ.ದಂಃ ಶೃಂಗೇರಿ**